1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ. **2039/2025**

ಹೆಸರುಃ ಮಲ್ಲಿಕಾರ್ಜುನ ಚಾಸಾಃ 2

ತಂದೆಯ ಹೆಸರುಃ ಬಸವರಾಜಪ್ಪ ಪ್ರಾಸಾ: 2

ವಯಸ್ಸುಃ 54 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಆಗರಬನ್ನಿಹಟ್ಟಿ ಗ್ರಾಮ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 13-01-2026 ರಂದು ಪ್ರಮಾಣ ವಚನ ಭೋಧಿಸಲಾಯಿತು .
ಅರೋಪಿತರನ್ನು ನ್ಯಾಯಾಂಗ ಬಂಧನದಿಂದ ವಾಟ್ಸಾಫ್ ಮೂಲಕ ಹಾಜರುಪಡಿಸಲಾಯಿತು. ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಮತ್ತು ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ಬುಸ್ಸೇನಹಳ್ಳಿ ಮಂಗಜ್ಜರ ತೋಟದ ಬಳಿ ದಿಃ 03-04-2025 ರಂದು ಪೊಲೀಸರು ಸ್ದಳ ಪಂಚನಾಮೆಗೆ ಬಂದಾಗ ಬೆಳಿಗ್ಗೆ 10.15 ಯಿಂದ 11.15 ಗಂಟೆ ಒಳಗೆ ಮಾಡಿರುತ್ತೇನೆ. ಸದರಿ ಮಹಜರನ್ನು ಚಾಸಾ-1ರವರ ಮೊಬೈಲ್ ನ್ನುಕಸಿದುಕೊಂಡ ಹೋದ ವಿಚಾರವಾಗಿ ಜರುಗಿಸಿದ್ದು ಸದರಿ ಸಮಯಕ್ಕೆ ಚಾಸಾ-1ರವರು ತೋರಿಸಿದ ಸ್ದಳದಲ್ಲಿ ನಿಪಿ-8 ರಂತೆ ಮಹಜರನ್ನು ಜರುಗಿಸಿರುತ್ತಾರೆ. ಸದರಿ ನಿಪಿ-8 ಕ್ಕೆ ನನ್ನೊಂದಿಗೆ ಚಾಸಾ-1 ಮತ್ತು 3 ರವರ ಸಹಿಯನ್ನು ಪಡೆದಿರುತ್ತಾರೆ ಸದರಿ ಸಮಯಕ್ಕೆ ಭಾವಚಿತ್ರವನ್ನು ತೆಗೆದಿರುತ್ತಾರೆ, ಸಾಕ್ಷಿ ಕಡತದಲ್ಲಿನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಿರ್ಯಾದಿ ಹಾಜರುಪಡಿಸಿದ ಮೊಬೈಲ್ ಅಮಾನತು ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿಯನ್ನು ಬುಸ್ಸೇನಹಳ್ಳಿ ಮಂಗಜ್ಜರ ತೋಟದ ಬಳಿ ಮಾಡಿರುತ್ತೇನೆ, ಸದರಿ ಸಮಯಕ್ಕೆ ನನ್ನೊಂದಿಗೆ ಚಾಸಾ-1 ಮತ್ತು 3 ರವರ ಹಾಜರಿದ್ದು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ, ಸದರಿ ಮಹಜರನ್ನು ಬೆಳಿಗ್ಗೆ 10.15 ರಿಂದ 11.15ವರೆಗೆ ಜರುಗಿಸಿರುತ್ತಾರೆ. ಸದರಿ ಮೊಬೈಲ್ ಚಾಸಾ1ರವರದ್ದು ಆಗಿರುತ್ತದೆ. ಸದರಿ ಮೊಬೆಎಲ್ ನ್ನು ನೋಡಿದರೆ ಗುರುತಿಸುತ್ತೇನೆ.ಸದರಿ ಮೊಬೈಲ್‌ನ್ನು ಚಾಸಾ1 ರವರು ಮಧ್ಯಂತರ ವಶಕ್ಕೆ ನ್ಯಾಯಾಲಯದ ಆದೇಶದಂತೆ ಪಡೆದಿರುತ್ತಾರೆ. ಸದರಿ ಸಮಯಕ್ಕೆ 2 ಭಾವಚಿತ್ರಗಳನ್ನು ತೆಗೆದಿರುತ್ತಾರೆ, ಸಾಕ್ಷಿ ಕಡತದಲ್ಲಿನ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-8 ಮತ್ತು 2 ಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-8 ಮತ್ತು 2 ನ್ನು ನೋಡಲಾಗಿ ಸಾಕ್ಷಿಯು ನಿಪಿ-8 ಮತ್ತು 2 ಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

ನಿಪಿ-8 ನ್ನು ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 9.30 ರಿಂದ 10.15ರವರೆಗೆ ಜರುಗಿಸಿದರು ಎಂದರೆ ಸರಿ. ಅದೇ ದಿನ ಚಾಸಾ-1ರವರು ತನಗೆ ಸಿಕ್ಕ ಫೋನ್ ನ್ನು ಹಾಜರುಪಡಿಸಿದ ಕುರಿತು ನಿಪಿ-2 ರಂತೆ ಮಹಜರನ್ನು 10.15 ಯಿಂದ 11.15 ವರೆಗೆ ಜರುಗಿಸಿದರು ಎಂದರೆ ಸರಿ.

( ಪಾಟೀ ಸವಾಲು ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ನೇಮಕವಾದ ವಕೀಲರು ಗೈರು ಹಾಜರಾದಕಾರಣ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
ಮತ್ತು ಜೆಎಂಎಫ್ ಸಿ, ಚನ್ನಗಿರಿ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ. **2039/2025**

ಹೆಸರುಃ ಉಮೇಶ ಚಾಸಾಃ 1

ತಂದೆಯ ಹೆಸರುಃ ಓಂಕಾರಪ್ಪ ಪ್ರಾಸಾ: 1

ವಯಸ್ಸುಃ 48 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಆಗರಬನ್ನಿಹಟ್ಟಿ ಗ್ರಾಮ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 23-09-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

ಅರೋಪಿತರನ್ನು ನ್ಯಾಯಾಂಗ ಬಂಧನದಿಂದ ವಾಟ್ಸಾಫ್ ಮೂಲಕ ಹಾಜರುಪಡಿಸಲಾಯಿತು.

ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ01-04-2025 ರಂದು ರಾತ್ರಿ 8.30 ಗಂಟೆಗೆ ನಾನು ಚನ್ನಗಿರಿಗೆ ಮಾತ್ರೆಯನ್ನು ತರಲು ಬೈಕಿನಲ್ಲಿ ಬಂದಿದ್ದು, ಮಾತ್ರೆಯನುನ ತೆಗೆದುಕೊಂಡು 9.00 ಗಂಟೆಗೆ ಊರಿಗೆ ಹಿಂತಿರುಗುವಾಗ ಬನ್ನಿಹಟ್ಟಿ ಗ್ರಾಮದ ಬಳಿ ಯಾರೋ ಅಪರಿಚಿತರು 3 ಜನರು ಕೈ ಅಡ್ಡ ಮಾಡಿ ಬೈಕ್ ನ್ನು ನಿಲ್ಲಿಸಲು ಸೂಚಿಸಿರುತ್ತಾರೆ, ಅದರಂತೆ ನಾನು ಬೈಕ್ ನ್ನು ನಿಲ್ಲಿಸಿದಾಗ ಸದರಿಯವರು ಪೆಟ್ರೋಲ್ ಕೇಳಿರುತ್ತಾರೆ. ಅಗ ನಾನು ಪೆಟ್ರೋಲ್ ಕೊಡಲು ನಿರಾಕರಿಸಿದಾಗ ನನಗೆ ಚಾಕುವನ್ನು ತೋರಿಸಿ ನನ್ನ ಬಳಿ ಇದ್ದ ಮೊಬೈಲ್ ನ್ನು ಕಿತ್ತುಕೊಂಡಿರುತ್ತಾರೆ. ಮೊಬೈಲ್ ನ್ನು ಕಿತ್ತುಕೊಂಡು ಕತ್ತಲಿನಲ್ಲಿ ಒಬ್ಬ ಓಡಿಹೋಗಿರುತ್ತಾನೆ. ಉಳಿದ ಇಬ್ಬರು ತಾವು ತಂದಿದ್ದ ಬೈಕಿನಲ್ಲಿ ಚನ್ನಗಿರಿ ಕಡೆಗೆ ಹೋಗಿರುತ್ತಾರೆ. ಅಷ್ಟರಲ್ಲಿ ನಮ್ಮ ಗ್ರಾಮದ ಚಾಸಾ-7 ಮತ್ತು 8 ರವರು ಸದರಿ ಮಾರ್ಗವಾಗಿ ಬರುತ್ತಿದ್ದು ನಾನು ಎಲ್ಲಾ ವಿಚಾರಗಳನ್ನು ಅವರಿಗೆ ತಿಳಿಸಿರುತ್ತೇನೆ. ಚಾಸಾ-8 ರವರು ಬುಸ್ಸೇನಹಳ್ಳಿ ಹಾಗೂ ಆಗರಬನ್ನಿಹಟ್ಟಿ ಗ್ರಾಮಸ್ಥರಿಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ ಚಾಸಾ-7 ಮತ್ತು 8 ರವರೊಂದಿಗೆ ಮತ್ತು ಬುಸ್ಸೇನಹಳ್ಳಿ ಗ್ರಾಮಸ್ಥರು

ಸದರಿ ಆಸಾಮಿಯನ್ನು ಅಕ್ಕಪಕ್ಕದ ತೋಟದ ಬಳಿ ಹುಡುಕಾಡಿರುತ್ತೇವೆ. ಅದರಂತೆ ಒಬ್ಬ ಆಸಾಮಿ ಮಂಗಜ್ಜರ ತೋಟದಲ್ಲಿ ಸಿಕ್ಕಿದ್ದು, ಆತನನ್ನು ಹಿಡಿದು ವಿಚಾರಿಸಿದಾಗ ಆತ ತನ್ನ ಹೆಸರು ಸಮೀರ್ , ಚನ್ನಗಿರಿ ವಾಸಿ ಎಂದು ತಿಳಿಸಿರುತ್ತಾನೆ. ಆತ ಬಿದ್ದು ಗಾಯಗೊಂಡಿರುತ್ತಾನೆ. ನಂತರ ಸದರಿ ಎಲ್ಲಾ ಸಂಗತಿಗಳನ್ನು ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ಗ್ರಾಮಸ್ಥರು ತಿಳಿಸಿರುತ್ತಾರೆ. ನಂತರ ಪೊಲೀಸರು ಬಂದು ಸದರಿ ಆಸಾಮಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ದಿಃ 02-04-2025 ರಂದು ಮಂಗಜ್ಜರ ತೋಟದಲ್ಲಿ ನಾನು ಮತ್ತು ಚಾಸಾ-2 ಮತ್ತು 3 ರವರೊಂದಿಗೆ ನನ್ನ ಮೊಬೈಲ್‌ಗಾಗಿ ಹುಡುಕಾಡಿದ್ದು, ಸದರಿ ತೋಟದ ಬದುವಿನ ಬಳಿ ನನ್ನ ಮೊಬೈಲ್ ಬಿದ್ದಿರುವುದನ್ನು ನೋಡಿ ತೆಗೆದುಕೊಂಡಿರುತ್ತೇನೆ.

ನಂತರ ದಿಃ 03-04-2025 ರಂದು ನಾನು ಠಾಣೆಗೆ ಹಾಜರಾಗಿ ನನ್ನ ಮೊಬೈಲ್ ನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಸದರಿ ಮೊಬೈಲ್ ನ್ನು ನಾನು ಮಂಗಜ್ಜರ ತೋಟದಲ್ಲಿ ಪೊಲೀಸರಿಗೆ ಕೊಟ್ಟಿರುತ್ತೇನೆ.

ನಂತರ ಪೊಲೀಸರು ಅದನ್ನು ಅಮಾನತುಪಡಿಸಿಕೊಂಡು ವಶಪಡಿಸಿಕೊಂಡಿರುತ್ತಾರೆ.

ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತು 3 ರವರ ಸಮಕ್ಷಮ ಬೆಳಿಗ್ಗೆ 10.30 ಯಿಂದ 11.15 ರವರೆಗೆ ಮಹಜರನ್ನು ಜರುಗಿಸಿರುತ್ತಾರೆ. ಸದರಿ ಮಹಜರಿಗೆ ಚಾಸಾ-2 ಮತ್ತು 3 ರವರು ಹಾಜರಿದ್ದು ನನ್ನೊಂದಿಗೆ ಸಹಿ ಮಾಡಿರುತ್ತಾರೆ,

ಸಾಕ್ಷಿ ಕಡತದಲ್ಲಿನ ಪಿರ್ಯಾದಿ ಹಾಜರುಪಡಿಸಿದ ಮೊಬೈಲ್ ಅಮಾನತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯಕ್ಕೆ ನಾನು ಹಾಜರುಪಡಿಸಿದ ಮೊಬೈಲ್ ನ್ನು ಪೊಲೀಸರು ವಶಕ್ಕೆ ಪಡೆದಿರುತ್ತಾರೆ.

ನಿಪಿ-2ರ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

ಸದರಿ ಮೊಬೈಲ್ ನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮೊಬೈಲ್ ನ್ನು ನ್ಯಾಯಾಲಯದ ಅದೇಶದ ಮೇರೆಗೆ ನನ್ನ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ.

(ಮಾನ್ಯ ಸ ಸ ಅ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

ಸಾಕ್ಷಿಗೆ ದಿನಾಂಕಃ 25-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು .
(ಅರೋಪಿತರನ್ನು ದಾವಣಗೆರೆ ಜೆ ಸಿ ಯಿಂದ ದೃಶ್ಯ ಸಮ್ಮೇಳನದ ಮೂಲಕ ಹಾಜರಾತಿ ಪಡೆಯಲಾಯಿತು).

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ27-05-2025 ರಂದು ನಾನು ನನ್ನ ಮೊಬೈಲ್ ನು ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಆದೇಶವನ್ನು ಪಡೆದು ನನ್ನ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ. ನಾನು ಠಾಣೆಗೆ ಹೋದಾಗ ನನ್ನ ಜೊತೆ ಪೊಲೀಸರು , ಚಾಸಾ-3 ಮತ್ತು 4 ರವರು ಹಾಜರಿದ್ದರು. ಸದರಿ ಸಮಯಕ್ಕೆ ಪಂಚನಾಮೆಯನ್ನು ಸಂಜೆ 5.00 ರಿಂದ 5.30ವರೆಗೆ ಜರುಗಿಸಲಾಯಿತು. ಸದರಿ ಮಹಜರಿಗೆ ಚಾಸಾ-3 ಮತ್ತು 4 ರವರು ಹಾಜರಿದ್ದು

ನನ್ನೊಂದಿಗೆ ಸಹಿ ಮಾಡಿರುತ್ತಾರೆ, ಸಾಕ್ಷಿ ಕಡತದಲ್ಲಿನ ಸದರಿ ಮೊಬೈಲ್ ಬಿಡುಗಡೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 (ಎ) ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ನ್ನು ಮು.ಮಾ-1 ಎಂದು ನಿಶಾನೆಗೊಳಿಸಿ ಚಾಸಾ-1ರವರ ಅಭಿರಕ್ಷೆಗೆ ಹಿಂದಿರುಗಿಸಲಾಯಿತು.

ನಿಪಿ-5ರ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು.

ದಿಃ03-04-2025 ರಂದು ಪೊಲೀಸರು ಸ್ಥಳ ಮಹಜರಿಗೆ ಬಂದಿದ್ದು ಸದರಿ ಸಮಯಕ್ಕೆ ನಾನು ತೊರಿಸಿದ ಸದಳದಲ್ಲಿ ನನ್ನೊಂದಿಗೆ ಚಾಸಾ-4 ಮತ್ತು 5 ರವರ ಸುಕ್ಷಮ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 10.46ರವರೆಗೂ ಜರುಗಿಸಿತ್ತಾರೆ, ಸಾಕ್ಷಿ ಕಡತದಲ್ಲಿನ ಸದರಿ ದಾಹಲೆಯನ್ನು ಮತ್ತು ಸಹಿಯನ್ನು ನೋಡಿ ಗುರುಸಿದ್ದು ಅದನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಿಪಿ-8ರ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ-9 ಎಂದು ಗುರುತಿಸಲಾಯಿತು.

ಅರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಸಮೀರ್ , ಮಹಮ್ಮದ್ ಮತ್ತು ರೋಷನ್ ಎನ್ನುವವರಾಗಿರುತ್ತಾರೆ, ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಎಲ್ಲಾ ವಿಚಾರಗಳ ಕುರಿತು ಯಾವುದೇ ಮುಂದುವರೆದ ಹೇಳಿಕೆ ನೀಡಿರುವುದಿಲ್ಲ.

(ಸದರಿ ಸಮಯಕ್ಕೆ ಅಂತರ್ಜಾಲದ ಸಮಸ್ಯೆಯಿಂದ ಆರೋಪಿತರ ಹಾಜರಾತಿ ಕಡಿತಗೊಂಡ ಕಾರಣ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**